
# ರೆಹಮಾನ್‌ಗೂ ಶಿವನಿಗೂ ಇಲ್ಲಿದೆ ಸಂಬಂಧ!

ಪ್ರವೀಣ ಕುಲಕರ್ಣಿ



ಇದು ಚುನಾವಣಾ ಸಮಯ. ಧರ್ಮದ ಕುರಿತು ಇನ್ನಿಲ್ಲದಂತೆ ಚರ್ಚೆ ನಡೆಯುತ್ತಿರುವ, ಕೋಮು ಸೌಹಾರ್ದದ ಕೊಳದಲ್ಲಿ ರಾಜಕೀಯದ ರಾಡಿ ಎಬ್ಬಿಸುತ್ತಿರುವ ಸಮಯವೂ ಹೌದು. ಹಿಂದೂ ಮತ್ತು ಮುಸ್ಲಿಮರನ್ನು ಎದುರಾಬದರು ನಿಲ್ಲಿಸಿ, ಒಬ್ಬರ ಮೇಲೆ ಒಬ್ಬರನ್ನು ಎತ್ತಿಕಟ್ಟಿ ಮತ ಧ್ರುವೀಕರಣ ಮಾಡುವ ಸಮಯ ಕೂಡ ಇದಾಗಿದೆ. ಆದರೆ, ಅಸ್ಸಾಂ ರಾಜ್ಯದ ಈ ಅಜ್ಜ ಹಿಂದೂ–ಮುಸ್ಲಿಂ ನಡುವಿನ ಸೌಹಾರ್ದದ ಸೇತುವೆಯಾಗಿ ಕಂಗೊಳಿಸುವ ಜೊತೆಗೆ ಧರ್ಮ–ಧರ್ಮದ ನಡುವೆ ಕಂದಕ ತೋಡಬೇಡಿ ಎಂಬ ಸಂದೇಶವನ್ನೂ ದಶಕಗಳಿಂದ ಸಾರುತ್ತಿದ್ದಾರೆ.

ಅಸ್ಸಾಂ ರಾಜ್ಯದ ರಂಗಮಹಲ್‌ನ ‘ಬುಹ್ರಾ ಗೋಸ್ವೈರ್ ಥಾನ್’ ಶಿವ ದೇವಾಲಯವನ್ನು ನಿರ್ವಹಣೆ ಮಾಡುತ್ತಿರುವವರು ಮೋತಿಬಾರ್ ರೆಹಮಾನ್ ಎಂಬ ಅಜ್ಜ. ಪ್ರತಿದಿನ ಎದ್ದೊಡನೆ ಈ ದೇವಾಲಯಕ್ಕೆ ಆಗಮಿಸುವ ಮೋತಿಬಾರ್, ಕಸ ಗುಡಿಸಿ, ದೀಪ ಬೆಳಗಿ ಶಿವನಿಗೆ ‘ಗುಡ್ ಮಾರ್ನಿಂಗ್’ ಹೇಳುತ್ತಾರೆ. ‘ಏನಜ್ಜ, ನಿಮಗೆ ಶಿವನ ಮೇಲೆ ಇಷ್ಟೊಂದು ಪ್ರೀತಿ’ ಎಂದು ಕೇಳಿದರೆ, ‘ನನಗೆ ಮಾತ್ರವಲ್ಲ, ತಲೆತಲಾಂತರದಿಂದ ನಮ್ಮ ಮನೆತನದವರಿಗೆ ಶಿವನ ಮೇಲೆ ವಿಶೇಷ ಪ್ರೀತಿ ಮತ್ತು ಅಷ್ಟೇ ಗಾಢವಾದ ನಂಟು’ ಎಂದು ಅವರು ಉತ್ತರಿಸುತ್ತಾರೆ.

ಈಗ ಮೋತಿಬಾರ್, ಹಿಂದೆ ಅವರ ತಂದೆ, ಅದಕ್ಕಿಂತ ಹಿಂದೆ ಮೋತಿಬಾರ್ ಅವರ ಅಜ್ಜ... ಹೀಗೆ ನೂರಾರು ವರ್ಷಗಳಿಂದ ರೆಹಮಾನ್ ಅವರ ಕುಟುಂಬ ಶಿವನ ದೇವಾಲಯದ ನಿರ್ವಹಣೆ ಮಾಡುತ್ತಾ ಬಂದಿದೆ. ಶಿವನೊಂದಿಗೆ ಎಂತಹ ಗಾಢ ಸಂಬಂಧ ತಮ್ಮ ಕುಟುಂಬಕ್ಕಿದೆ ಎಂಬ ವಿಷಯವಾಗಿ ಅಜ್ಜ ಒಂದು ಕಥೆ ಹೇಳುತ್ತಾರೆ. ‘ಬೋಹ್ರನ್ನಾ ಎಂಬುವವರು ನಮ್ಮ ಕುಟುಂಬದ ಪೂರ್ವಜರು. ರಂಗಮಹಲ್‌ನಲ್ಲಿಯೇ ಅವರು ನೆಲೆ ಕಂಡುಕೊಂಡಿದ್ದರು. ಒಂದುದಿನ ಶಿವ, ಬೋಹ್ರನ್ನಾ ಅವರ ಕನಸಿನಲ್ಲಿ ಬಂದು, ನಾನು ನಿಮ್ಮೂರಿನಲ್ಲಿಯೇ ನೆಲೆ ನಿಲ್ಲುವೆ. ನನ್ನ ಮಂದಿರದ ಹೊಣೆಯನ್ನು ನಿಮ್ಮ ಕುಟುಂಬವೇ ಹೊರಬೇಕು. ನಿಮ್ಮ ಮನೆತನದವರ ಸೇವೆ ನನಗೆ ಬೇಕು ಎಂದರಂತೆ. ಅಂದಿನಿಂದಲೂ ಶಿವನಿಗೂ ನಮಗೂ ನಂಟು ಶುರುವಾಗಿದೆ ನೋಡಿ’ ಎಂದು ಮೋತಿಬಾರ್ ನಗುತ್ತಾ ಹೇಳುತ್ತಾರೆ.

ಒಂದೆಡೆ ಮುಸ್ಲಿಂ ಬಾಹುಳ್ಯದ ಬಾಂಗ್ಲಾದೇಶ, ಇನ್ನೊಂದೆಡೆ ಬೌದ್ಧರ ಪ್ರಭಾವದ ಮ್ಯಾನ್ಮಾರ್‌ನ ನಡುವೆ ಸ್ಯಾಂಡ್‌ವಿಚ್‌ನಂತೆ ಸಿಲುಕಿ ಹಲವು ಸಮುದಾಯಗಳು ಕರಗಿಹೋದ ಪ್ರದೇಶದಲ್ಲಿದೆ ಮೋತಿಬಾರ್ ಅವರ ಊರು. ಪೌರತ್ವ ನೋಂದಣಿ ಪ್ರಕ್ರಿಯೆ ಶುರುವಾದಾಗ ಅಸ್ಸಾಂ ಹೊತ್ತಿ ಉರಿದಿತ್ತು. ಅಲ್ಲಿನ ದೊಡ್ಡ ಪ್ರಮಾಣದ ಮುಸ್ಲಿಮರಿಗೆ ಎಲ್ಲಿ ಪೌರತ್ವ ಕಳೆದುಕೊಳ್ಳಬೇಕಾಗುವುದೋ ಎನ್ನುವ ಭೀತಿ. 2011ರ ಜನಸಂಖ್ಯಾ ವರದಿ ಪ್ರಕಾರ, ಅಸ್ಸಾಂನಲ್ಲಿ ಶೇ. 61ರಷ್ಟು ಹಿಂದೂಗಳಿದ್ದರೆ, ಶೇ. 34ರಷ್ಟು ಮುಸ್ಲಿಮರಿದ್ದಾರೆ. ಕ್ರೈಸ್ತರು, ಬೌದ್ಧ, ಸಿಖ್ ಹಾಗೂ ಇತರ ಧರ್ಮೀಯರು ಶೇ.5ರಷ್ಟಿದ್ದಾರೆ. ‘ಪೌರತ್ವ ನೋಂದಣಿ ಮಾಡಿಸದಿದ್ದರೆ ಭಾರತೀಯ ಪೌರತ್ವ ಕಳೆದುಕೊಳ್ಳಬೇಕಾಗುತ್ತದೆ ಎಂದು ಎಲ್ಲರೂ ಹೇಳುತ್ತಾರೆ. ನಾನಂತೂ ಮಾಡಿಸಿದ್ದೇನೆ. ಈಗ ಯಾವ ಭೀತಿಯೂ ಇಲ್ಲ’ ಎಂದು ಮೋತಿಬಾರ್ ಹೇಳುತ್ತಾರೆ.

ಹಿಂದೂಗಳು ಮಾತ್ರವಲ್ಲದೆ, ಮುಸ್ಲಿಮರು ಸಹ ಈ ದೇವಾಲಯಕ್ಕೆ ಬಂದು ಪ್ರಾರ್ಥನೆ ಸಲ್ಲಿಸುತ್ತಾರೆ. ಅವರಿಗೆ ಶಿವನಿಂದ ನೆಮ್ಮದಿ ಸಿಕ್ಕಿದೆ ಎನ್ನುತ್ತಾರೆ ಈ ಅಜ್ಜ. ನಿಸರ್ಗದ ಮಡಿಲಲ್ಲಿ ಈ ಮಂದಿರ ಇದೆ. ಸುತ್ತಲೂ ದಟ್ಟ ಹಸುರು ಸೂಸುವ ಮರಗಿಡಗಳಿವೆ. ಶಿವನ ಸನ್ನಿಧಿಯಲ್ಲಿ ಕಾಲ ಕಳೆಯುವುದಕ್ಕಿಂತ ಖುಷಿ ಸಮಾಚಾರ ಬೇರಿಲ್ಲ ಎಂದೆನ್ನುವ ಅಜ್ಜ, ಬೆಳಗಿನಿಂದ ಸಂಜೆವರೆಗೆ ದೇವಾಲಯದಲ್ಲೇ ಇರುತ್ತಾರೆ. ಮನೆಮಂದಿಯೆಲ್ಲ ಇನ್ನೂ ಬೆಳಗಿನ ಸಿಹಿ ನಿದ್ದೆಯಲ್ಲಿರುವಾಗ ನಸುಕಿನಲ್ಲಿ ಏಳುವ ಅಜ್ಜ, ನಮಾಜ್ ಮಾಡಿ, ಸ್ನಾನ ಮುಗಿಸುತ್ತಾರೆ. ನಂತರ ನಿಧಾನವಾಗಿ ಹೆಜ್ಜೆ ಹಾಕುತ್ತಾ ಮಂದಿರದ ಕಡೆಗೆ ಬರುತ್ತಾರೆ. ಮಂದಿರದ ಆಚೆ ದೂರದಲ್ಲಿ ಚಪ್ಪಲಿ ಕಳಚಿಟ್ಟು, ಒಂದು ಪೊರಕೆ ತೆಗೆದುಕೊಂಡು ಅಂಗಳವನ್ನೆಲ್ಲ ಶುಚಿಗೊಳಿಸುತ್ತಾರೆ. ನಂತರ ಮಂದಿರದೊಳಗಿನ ಕಸಗುಡಿಸಿ, ದೀಪ ಬೆಳಗುತ್ತಾರೆ.

‘ನಾನು ಇಸ್ಲಾಂ ಧರ್ಮವನ್ನು ಪಾಲಿಸುವೆ. ನಿತ್ಯ ಐದು ಬಾರಿ ತಪ್ಪದೇ ನಮಾಜ್ ಮಾಡುತ್ತೇನೆ. ಆದರೆ, ಈ ಶಿವನೂ ನನಗೆ ಬೇಕು. ಇಲ್ಲಿ ಬಂದು ಮಂದಿರ ಶುಚಿಗೊಳಿಸಿ, ಊದುಬತ್ತಿ ಬೆಳಗದಿದ್ದರೆ ನಾನಿದ್ದು ಏನು ಪ್ರಯೋಜನ’ ಎಂದು ಭಾವುಕರಾಗಿ ಮೋತಿಬಾರ್ ಪ್ರಶ್ನಿಸುತ್ತಾರೆ. ‘ನನಗೆ ವಯಸ್ಸು ಆಗುತ್ತಾ ಬಂತು. ಮೊದಲಿನಂತೆ ಓಡಾಡಲು ಆಗುವುದಿಲ್ಲ. ಆದರೆ, ಶಿವನನ್ನು ನೋಡದೇ ಇರಲು ಸಾಧ್ಯವೇ ಇಲ್ಲ’ ಎಂದೆನ್ನುವ ಈ ಅಜ್ಜ, ‘ನನ್ನ ನಂತರ ನನ್ನ ಮಕ್ಕಳು ಈ ಕಾಯಕ ಮುಂದುವರಿಸುತ್ತಾರೆ’ ಎಂದು ವಿಶ್ವಾಸದಿಂದ ಹೇಳುತ್ತಾರೆ.

ಶ್ರಾವಣದಲ್ಲಿ ಶಿವನಿಗೆ ನಿತ್ಯ ವಿಶೇಷ ಪೂಜೆ ಆಗಬೇಕಲ್ಲವೇ? ನಾನು ಇಸ್ಲಾಂ ಧರ್ಮ ಪಾಲನೆ ಮಾಡುವುದರಿಂದ ನನ್ನಿಂದ ಪೂಜೆ ಮಾಡಲು ಆಗಲ್ಲ. ಹೀಗಾಗಿ ಆಗ ಪೂಜಾರಿಯೊಬ್ಬರು ಬಂದು ನಿತ್ಯ ಪೂಜೆ ಸಲ್ಲಿಸುತ್ತಾರೆ. ಆ ಮಾಸದಲ್ಲಿ ಭಕ್ತರ ಸಂಖ್ಯೆಯೂ ಹೆಚ್ಚಿರುತ್ತದೆ. ಎಲ್ಲರೂ ನನ್ನನ್ನು ಪ್ರೀತಿ ಮಾಡುತ್ತಾರೆ’ ಎಂದೆನ್ನುವ ಈ ಅಜ್ಜ, ಕೋಮು ಸೌಹಾರ್ದದ ದೊಡ್ಡ ಸೇತುವಾಗಿ ದೇಶದ ಮುಂದೆ ನಿಲ್ಲುತ್ತಾರೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65